ಅದಾಸಂ.169/2015 , ಪಿಡಬ್ಲ್ಯು3

ದಿಃ 12.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃಃ ಪ್ರತಿವಾದಿ ಪರ ವಕೀಲರಿಂದಃಶ್ರೀ ಜೆ ಎನ್ ಎನ್ ರವರಿಂದಃ**

ದಾವಾ ಸ್ವತ್ತಿನ ಮಾತುಕತೆ 1 ನೇ ಪ್ರತಿವಾದಿ ಮನೆಯಲ್ಲಿ ಆಗಿರುತ್ತದೆ. ನಿಪಿ 1 ಆದ ದಿನಾಂಕ ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಕ್ರಯದ ಮಾತುಕತೆಗೆ 1 ನೇ ಪ್ರತಿವಾದಿ ನನ್ನನ್ನು ಕರೆದಿದ್ದರು . ಆಗ ನಾನು , ವಾದಿ ಮತ್ತು 1 ನೇ ಪ್ರತಿವಾದಿ ಸೇರಿದ್ದೆವು . 1 ನೇ ಪ್ರತಿವಾದಿ ನನ್ನನ್ನು ತಾ.ಕಛೇರಿಯಲ್ಲಿ ಬಿಟ್ಟು ಛಾಪಾಕಾಗದವನ್ನು ತೆಗೆದುಕೊಂಡು ಬಂದಿರುತ್ತಾರೆ. ಛಾಪಾಕಾಗದವನ್ನು 11-00 ಗಂಟೆಗೆ ತೆಗೆದುಕೊಂಡು ಬಂದಿರುತ್ತಾರೆ. 1 ನೇ ಪ್ರತಿವಾದಿ ತಂದಿದ್ದ ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿ ನಿಪಿ 1 ನ್ನು ತಯಾರಿಸಿರುತ್ತಾರೆ. 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು 15 ವರ್ಷ ಮಾರಾಟ ಮಾಡಬಾರದೆಂದು ಷರತ್ತು ಇತ್ತು ಎಂದರೆ ಸರಿ . ನಿಪಿ 1 ನ್ನು ಬರೆಯುವ ಸಮಯದಲ್ಲಿ ಇನ್ನೂ 3 ತಿಂಗಳ ಶರತ್ತು ಇತ್ತು . ಆಗ 1 ನೇ ಪ್ರತಿವಾದಿ ಆ ಶರತ್ತು ಮುಗಿದ ನಂತರ ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಹೇಳಿದ್ದರು . ಮೇಲೆ ಹೇಳಿದ ಶರತ್ತನ್ನು ನಿಪಿ 1 ರಲ್ಲಿ ಬರೆಸಿದ್ದರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ನನಗೆ ಬಂದು 1 ನೇ ಪ್ರತಿವಾದಿಗೆ ಜಮೀನು ಬರೆದುಕೂಟ್ಟಿಲ್ಲ ಎಂದು ಹೇಳಿರುತ್ತಾರೆ. ನಿಪಿ1 ಆದ 4 ತಿಂಗಳಿಗೆ ವಾದಿ ನನ್ನ ಹತ್ತಿರ ಬಂದು ಹೇಳಿರುತ್ತಾರೆ.

1 ನೇ ಪ್ರತಿವಾದಿ, ವಾದಿ ಹೆಸರಿನಲ್ಲಿ ನಿಪಿ 1 ರಂತೆ ಯಾವುದೇ ಕ್ರಯ ಕರಾರು ಪತ್ರ ಕಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 1 ರಂತೆ ಯಾವುದೇ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ಕ್ರಯದ ಸ್ವತ್ತಿನ ಬಗ್ಗೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು , ವಾದಿ, ಹಾಗೂ ಪತ್ರ ಬರಹಗಾರರು ಸೇರಿ ನಿಪಿ 1 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಸಾಕ್ಷಿದಾರರು ಬಾಗೇಪಲ್ಲಿಗೆ

ಬಂದು ನಿಪಿ 1 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,

ಬಾಗೇಪಲ್ಲಿ